# ವಾರಕ್ಕೊಮ್ಮೆ ಸಂಚಾರಿ ಕ್ಯಾತ್‌ಲ್ಯಾಬ್

ಹಾಸನ : ವೈವಸ್ ಗ್ರೂಪ್ ಸಮಾಜದ ಎಲ್ಲಾ ವರ್ಗಗಳಿಗೂ ಅತ್ಯುತ್ತಮ ಗುಣಮಟ್ಟದ ಹೃದಯ ಶುಶ್ರೂಷೆಯನ್ನು ತಲುಪಿಸುವ ಉದ್ದೇಶದಿಂದ ಮೊಬೈಲ್ ಕಾರ್ಡಿಯಾಕ್ ಕ್ಯಾತ್‌ಲ್ಯಾಬ್ ಪ್ರತಿಷ್ಠಾಪಿಸಿದ್ದು ನಗರದ ಜನರು ಸಹ ಈ ಪ್ರಯೋಜನ ಪಡೆಯಬಹುದೆಂದು ವೈವಸ್ ಸಂಸ್ಥೆಯ ವೈದ್ಯ ಡಾ|| ಗುಪ್ತ ತಿಳಿಸಿದ್ದಾರೆ.

ನಗರದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಹಾಸನಕ್ಕೆ ವಾರಕ್ಕೊಮ್ಮೆ ಕ್ಯಾತ್ ಲ್ಯಾಬ್ ಆಗಮಿಸಲಿದ್ದು ಈ ಮೊಬೈಲ್ ಕ್ಯಾತ್‌ಲ್ಯಾಬ್ ಅನ್ನು ಇಲ್ಲಿ ಪ್ರತಿಷ್ಠಾಪಿಸುವುದರಿಂದ ದೂರದ ಗ್ರಾಮ ಮತ್ತು ಅರೆ ಪಟ್ಟಣಗಳಿಂದ ಜನರು ಬೆಂಗಳೂರಿಗೆ ಹೃದಯ ಸಂಬಂಧಿ ಖಾಯಿಲೆಯ ಚಿಕಿತ್ಸೆಗಾಗಿ ತೆರಳುವುದನ್ನು ತಪ್ಪಿಸಬಹುದೆಂದರು.

ಸೇವಾ ಮನೋಭಾವನೆಯ ವೈದ್ಯರ ಸಹಾಯದಿಂದ ನಿಯಮಿತ ರಸ್ತೆಗಳಲ್ಲಿಯೆ ಮೊಬೈಲ್ ಕ್ಯಾತ್ ಲ್ಯಾಬ್ ರಾಜ್ಯದ ಯಾವುದೇ ಮೂಲೆಯನ್ನು ತಲುಪಲು ಸಾಧ್ಯವಾಗುತ್ತದೆ. ರೋಗಿಗೆ ಶ್ರೇಷ್ಟ ಮಟ್ಟದ ಆರೈಕೆ ಮನೆ ಬಾಗಿಲಿಗೆ ತಲುಪಿಸಿದಂತಾಗುತ್ತದೆ. ಅತ್ಯಾಧುನಿಕವಾದ ಸೌಲಭ್ಯವು ರೋಗಿಗೆ ಹೆಚ್ಚು ವೆಚ್ಚವಾಗದೆ ಸಿಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಾ|| ಸೋಲಂಕಿ, ಡಾ|| ಗಿರೀಶ್ ನಾಯರ್ ಹಾಜರಿದ್ದರು.